ಸಂಸ್ಕೃತ ರೂಪವೂ ಇಲ್ಲಿ ಪ್ರಯೋಗಿಸಿರುವ **ವಾಂಛೆ** ಎನ್ನುವ ಪದಕ್ಕೆ ಸರಿದೂಗದು. ಇದೇ ಬೇಕು – ಎಂಬ ಮಗುವಿನ ಮನಸ್ಸಿನ ತೀಕ್ಷ್ಣವಾದ, ಹಠದ ಬಯಕೆಯೇ **ವಾಂಛೆ**. ಬೇಕಾದ್ದನ್ನು ಗಿಟ್ಟಿಸಿಕೊಳ್ಳುವ ರಂಪಾಟದ ಸೂಕ್ಷ್ಮ ಹೆಜ್ಜೆಗುರುತುಗಳು ಈ ಪದದಲ್ಲಿವೆ.

**ತದ್ದೈವ:** ತತ್‌ಕ್ಷಣ, ಒಡನೆಯೇ. ವಾಕ್ಯವನ್ನು ಪೂರ್ಣವಾಗಿ ಹೇಳಿ ಮುಗಿಸುವುದರೊಳಗಾಗಿ ತಾಯಿ ಮಗುವಿನ ಇಂಗಿತವನ್ನು ಅರಿತುಕೊಳ್ಳುತ್ತಾಳೆ. ಅವಳು ಇಂಗಿತಜ್ಞೆ. ತೊದಲುನುಡಿಯಲ್ಲೇ ಶಿಶು ಜಲ್ಪಿಸಬಹುದು, ಅದಕ್ಕೊಂದು ಭಾಷಾಂತರಕೋಶ ಸದಾ ತಾಯಿಯ ಮಿದುಳಿನಲ್ಲಿ ಸಿದ್ಧವಾಗಿರುತ್ತದೆ. ಇಂತಹ ಆರಂಭಾಕ್ಷರಿ ಪದ್ಯದಲ್ಲಿ ಯಾವಾಗಲೂ ತಾಯಿಯದೇ ಗೆಲುವು. ಏಕೆಂದರೆ, ಮಗುವಿನ ಇಂಗಿತವನ್ನು ಅರಿಯುವುದೊಂದೇ ತಡ, ಕ್ಷಣಾರ್ಧದಲ್ಲಿ ಅದನ್ನು ಅವಳು ಪೂರೈಸಿಬಿಡುತ್ತಾಳೆ.

**ದಿಶಸಿ:** ದಿಶಸಿ ಅಂದರೆ, ಕಾಣಿಸಿಬಿಡುತ್ತೀಯೆ; ಕೊಡುವುದಲ್ಲ ನೀಡುವುದಲ್ಲ, ಬೇಡುವವನಿಗೆ ಕಾಣಿಸುವುದು. ಭಕ್ತ ತಾನೇ ಅನುಭವಿಸುವಂತೆ, ಅವನಿಗೆ ಕಾಣ್ಕೆಯನ್ನು ದಯಪಾಲಿಸುವುದು.

ಈಗ ಕಾದಿರಿಸಿರುವ 'ಭವಾನಿ'ಯ ಪದ ಚಮತ್ಕಾರದ ಬಗ್ಗೆ ನಾಲ್ಕು ಮಾತು. ಸ್ವಲ್ಪ ಕ್ಲಿಷ್ಟವೆನಿಸಿದರೆ, ಬಿಟ್ಟುಬಿಡಿ. ಸಂಸ್ಕೃತದಲ್ಲಿ ಪದಗಳಿಗೆ ನಾನಾರ್ಥಗಳುಂಟು. ನಾಮಪದವಾದಾಗ *ಭವಾನಿ* ಎಂದರೆ **ಪಾರ್ವತಿ** ಎಂದೂ, ಕ್ರಿಯಾಪದವಾದಾಗ ಅದಕ್ಕೆ *'[ನಾನು] ಆಗಬೇಕು, ಆಗುವ ಅಕಾಂಕ್ಷೆ ಇದೆ, ಆಗಲೆಂಬ ಪ್ರಾರ್ಥನೆ ಸಲ್ಲಿಸುತ್ತೇನೆ'*– ಇತ್ಯಾದಿ ಅರ್ಥಗಳು ಇವೆ. *ಶುಭಂ ಭವತು* ([ನಿಮಗೆ] ಒಳ್ಳೆಯದು ಆಗಲಿ)– ಎಂಬುದನ್ನು ಕೇಳಿದ್ದೀರಿ. *ಸರ್ವೇ ಸುಖಿನ: ಭವನ್ತು* ([ಅವರಿವರು] ಎಲ್ಲರೂ ಸುಖಿಗಳು ಆಗಿರಲಿ), *ದೀರ್ಘ ಆಯುಷ್ಮಾನ್ ಭವ* (ಹೆಚ್ಚು ಆಯುಸ್ಸುಳ್ಳವನು [ನೀನು] ಆಗು)– ಇಂಥ ಹಾರೈಕೆಗಳನ್ನೂ ಕೇಳಿದ್ದೀರಿ. ಇಲ್ಲಿನ ಭವತು ಮುಂತಾದ ಕ್ರಿಯಾಪದಗಳು 'ಭೂ' ಎಂಬ ಧಾತುವಿನ ಆಜ್ಞೆ, ಆಮಂತ್ರಣ, ಪ್ರಾರ್ಥನೆ, ಹಾರೈಕೆಗಳ ಗುಂಪಿನ ಭವಿಷ್ಯತ್ ಕ್ರಿಯಾರೂಪಗಳು. **ನಾನು ಆಗಬೇಕು– ಎಂಬುದಕ್ಕೆ 'ಭೂ' ಧಾತುವಿನ ಸಂಸ್ಕೃತ ಕ್ರಿಯಾಪದ 'ಭವಾನಿ'– ಎಂದು.** [ಖಚಿತವಾಗಿ 'ನಾನು ಆಗುವೆನು'– ಎಂಬುದಕ್ಕೆ ಭವಿಷ್ಯಾಮಿ ಎಂಬ ಇನ್ನೊಂದು ಭವಿಷ್ಯತ್ ಕಾಲದ ರೂಪ ಇದೆ. ಅದು ಬೇರೆ.]

'ನಾನು ನೀನೇ *ಆಗಬೇಕು*', ಅಂದರೆ ನಾನೂ ನೀನೂ ಒಂದಾಗಬೇಕು, ನಿನ್ನಲ್ಲಿ ಸೇರಿಬಿಡಬೇಕು, ನನಗೆ ಸಾಯುಜ್ಯಪದವಿ ಸಿಗಬೇಕು– ಎಂದೆಲ್ಲ ಅರ್ಥ ಬರುವಂತೆ 'ಭವಾನಿ ತ್ವಮ್'– ಎಂಬ ಪದ ಯುಗಳ ಪ್ರಯೋಗವನ್ನು ಚಾತುರ್ಯದಿಂದ ಅದ್ವೈತ ಪ್ರತಿಪಾದಕ ಕವಿ ಇಲ್ಲಿ ಮಾಡಿದ್ದಾರೆ. ಈ ನಾರಿಕೇಳಪಾಕದ ಸೊಗಸು ಸವಿಯುವುದಕ್ಕೆ ನಾವು ತಕ್ಕಷ್ಟು ಸಂಸ್ಕೃತ ಅಧ್ಯಯನ ಮಾಡಿದರೆ ಚೆನ್ನ.

**ಒಟ್ಟಾರೆ, "ತನ್ನ ಮಗುವಿನ ಮನದಿಂಗಿತವನ್ನು ಸ್ವಾಭಾವಿಕವಾಗಿ ಅರಿಯುವ ಯಾವ ತಾಯಿಯಾದರೂ ಅದಕ್ಕೆ ಏನು ಬೇಕೆಂಬುದನ್ನು ಕ್ಷಣಾರ್ಧದಲ್ಲಿ ಅರಿತು ಅದರ ಬಯಕೆಯನ್ನು ಈಡೇರಿಸುವಂತೆ, ನಿನ್ನನ್ನು 'ಕಾಣುವ' ನನ್ನ ಇಷ್ಟಾರ್ಥವನ್ನು, ಓ ಜಗನ್ಮಾತೆಯೇ, ನಾನು ಕೇಳುವ ಮೊದಲೇ ಪೂರೈಸು" ಎಂದು ಕಳಕಳಿಯಿಂದ ಶ್ರೀಶಂಕರರು ಇಲ್ಲಿ ಕೇಳಿಕೊಳ್ಳುತ್ತಿದ್ದಾರೆ. ಮಗುವಿನ ಮನಸ್ಸಿನ ಭಕ್ತರೆಲ್ಲರಿಗೂ ತಾಯಿಯ ದರ್ಶನ ಸಿಕ್ಕೇ ಸಿಗುತ್ತದೆ!**

## ಭಗವಂತನನ್ನು ಅರಸುತ್ತ

ಸ್ವಾಮಿ ಯತೀಶ್ವರಾನಂದ

**ಸಾಧನೆಯಲ್ಲಿ ಸಂತೋಷದ ಅನುಭವ**

ಗುರುವು ಭಕ್ತನಿಗೆ ಉಪದೇಶವನ್ನು ನೀಡುವನು; ಆಧ್ಯಾತ್ಮಿಕ ಜೀವನದ ವಿವಿಧ ಹಂತಗಳನ್ನು ಬೋಧಿಸುವನು; ಮಾರ್ಗದರ್ಶನ ಮಾಡಿ ಗುರಿಯತ್ತ ಕೊಂಡೊಯ್ಯುವನು. ಸಾಧಕನು ಪರತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡಾಗ, ಅವನ ಸಂಶಯಗಳೆಲ್ಲ ನಾಶವಾಗುವವು. ಸಾಧನೆಯ ಸಮಯದಲ್ಲಿ, ಸಾಧಕನು ವಿವಿಧ ಬಗೆಯ ಆಧ್ಯಾತ್ಮಿಕ ಅನುಭವಗಳನ್ನು ಪಡೆದುಕೊಳ್ಳುತ್ತಾನೆ. ಅವನು ದೇವತಾರೂಪದ ಅನೇಕ ದರ್ಶನಗಳನ್ನು ಹೊಂದಬಹುದು. ಆದರೆ ಅಲ್ಲಿಗೆ ಅವನು ನಿಲ್ಲಬಾರದು; ಮುಂದುವರಿದು ಸರ್ವವ್ಯಾಪಕವಾದ ಪರಬ್ರಹ್ಮನೊಡನೆ ಒಂದಾಗಬೇಕು. ಎಲ್ಲ ಸಂಶಯಗಳೂ ನಾಶವಾಗುವ ಅತ್ಯುನ್ನತ ಸ್ಥಿತಿ ಅದು.

ಮನಸ್ಸನ್ನು ಜಪ ಮತ್ತು ಧ್ಯಾನಗಳ ಅಭ್ಯಾಸದಿಂದ ಪವಿತ್ರಗೊಳಿಸಬೇಕು. ಈ ಬಗೆಯ ಅಭ್ಯಾಸದಿಂದ ದೇಹವು ಪರಿಶುದ್ಧವಾಗುವುದು; ಚಿಕ್ಕಪುಟ್ಟ ವ್ಯಾಧಿಗಳು ನಮ್ಮನ್ನು ಬಾಧಿಸುವುದಿಲ್ಲ. ಹಾಗೆಯೇ ಮಾನಸಿಕ ಶಕ್ತಿಸಂಪನ್ನರಾಗುವೆವು; ಹೃದಯವೂ ವಿಶಾಲಗೊಳ್ಳುವುದು. ಆಗ, ನಾವು ನಮ್ಮ ಅಂತರಂಗದಲ್ಲಿರುವ ದಿವ್ಯತೆಯ ಜೊತೆಗೆ ಹೆಚ್ಚು ಹೆಚ್ಚು ಸಂಪರ್ಕಕ್ಕೆ ಬರುವೆವು. ಸತ್ಯವು ತಾನೇ ತಾನಾಗಿ ನಮ್ಮೊಳಗಿನಿಂದ ಪ್ರಕಟಗೊಳ್ಳುವುದು. ಮೂಕನೊಬ್ಬನು ತಾನು ಸವಿದ ಸಿಹಿಯ ಬಗ್ಗೆ ಯಾರಿಗೂ ಹೇಳಲಾರನಷ್ಟೆ. ಆಧ್ಯಾತ್ಮಿಕ ಜಾಗೃತಿಯೂ ಅದೇ ರೀತಿ. ಇದೇ ಪರೀಕ್ಷೆ – ಈ ದಿವ್ಯತೆಯ ಸಂಪರ್ಕ ಹೊಂದಿದ ಹಾಗೆಲ್ಲ, ಸಾಧಕನು ತನ್ನೊಳಗೇ ಅವ್ಯಕ್ತ ಆನಂದವನ್ನು ಭಾವಿಸುವನು.

ಧ್ಯಾನಕ್ಕೆ, ಸಂಶಯ, ಅಸೂಯೆ, ಮನಸ್ಸಿನ ಚಂಚಲತೆ ಮೊದಲಾದ ಹಲವು ಅಡೆತಡೆಗಳಿರುತ್ತವೆ. ಅವುಗಳಲ್ಲಿ ಸಂಶಯವು ಬಹು ದೊಡ್ಡ ಅಡ್ಡಿಯಾಗಿದೆ. ಅದನ್ನು ನಿವಾರಿಸಿ, ಸಂಪೂರ್ಣ ಶ್ರದ್ಧೆಯನ್ನು ನಾವು ಬೆಳೆಸಿಕೊಳ್ಳಬೇಕು. ಪ್ರಾಪಂಚಿಕ ವಿಷಯಗಳನ್ನು ಕುರಿತ ಮಾನಸಿಕ ಚಂಚಲತೆಯನ್ನೂ ನಿವಾರಿಸಿಕೊಳ್ಳಬೇಕು. ಭಗವಂತನ ಸಾಕ್ಷಾತ್ಕಾರಕ್ಕಾಗಿ ವ್ಯಾಕುಲರಾಗುವುದು ನಿಜವಾಗಿಯೂ ಒಂದು ಅನುಗ್ರಹವೇ ಆಗಿದೆ. ಆದರೆ ಅದು ಬರುವುದು ಬಹಳ ವಿರಳ. ನಾವು ಯಾವಾಗಲೂ ಜಾಗೃತರಾಗಿರಬೇಕು, ನಮ್ಮ ಭಾವೋದ್ರೇಕಗಳನ್ನು ಭಗವತ್ಸಾಕ್ಷಾತ್ಕಾರಕ್ಕಾಗಿನ ವ್ಯಾಕುಲತೆಯೆಂದು ತಪ್ಪಾಗಿ ತಿಳಿಯಬಾರದು.

ಆಧ್ಯಾತ್ಮಿಕ ಸಾಧನೆಯಲ್ಲಿ ನಮಗೆ ರುಚಿ ಒಮ್ಮೆಗೇ ಬರುವುದಿಲ್ಲ. ಅದಕ್ಕಾಗಿ ನಾವು ಬಹಳ ಪ್ರಯತ್ನಪಡಬೇಕು. ನಮ್ಮ ಶಕ್ತಿಯನ್ನೆಲ್ಲ ಅದಕ್ಕಾಗಿಯೇ ವ್ಯಯಿಸಬೇಕು. ಸ್ವಲ್ಪಕಾಲದ ನಂತರ ನೀವು ಪ್ರಗತಿಯನ್ನು ಕಾಣುವಿರಿ, ಆದರೆ ಅದರಲ್ಲಿಯೇ ತೃಪ್ತರಾಗಬೇಡಿ. ಪರತತ್ತ್ವವನ್ನು ಸಮೀಪಿಸುವವರೆಗೂ ತೀವ್ರ ಅತೃಪ್ತಿಯನ್ನು ಕಾಯ್ದುಕೊಂಡು ಬನ್ನಿ. ಶ್ರೀರಾಮಕೃಷ್ಣರು ಜಗನ್ಮಾತೆಗೆ ಮೊರೆಯಿಡುತ್ತಿದ್ದರು, "ಅಮ್ಮಾ, ಮತ್ತೊಂದು ದಿನ ಕಳೆದುಹೋಯಿತು. ನಿನ್ನ ದರ್ಶನ ನನಗೆ ಆಗಲಿಲ್ಲ." ಇದು ನಿಜವಾದ ಆಧ್ಯಾತ್ಮಿಕ ವ್ಯಾಕುಲತೆ.

**(ಮುಂದಿನ ತಿಂಗಳು:** ಪ್ರಾಪಂಚಿಕ ಸನ್ನಿವೇಶಗಳ ನಡುವೆಯೂ ಆನಂದದ ಅಭ್ಯಾಸ**)**